## ನಿಮ್ಮೊಡನೆ

# ಯಾವುದು ನಮ್ಮ ಆದ್ಯತೆಯ ವಿಷಯ: ಹಸಿವೆ-ಸಂಕಟವ್ರೋ ಸಂಕೇತಗಳೋ...

ನಿರ್ದಿಷ್ಟ ಅವಧಿಯ ಪತ್ರಿಕೆಗಳನ್ನು ಒಟ್ಟಿಗಿಟ್ಟುಕೊಂಡು ಗಮನಿಸಿದರೆ – ರಾಜಕಾರಣಿಗಳ ಕೆಸರೆರಚಾಟ, ದೇಶಭಕ್ತಿ ಅಥವಾ ದೇಶದ್ರೋಹದ ನೆಪದಲ್ಲಿ ಸಮಾಜದಲ್ಲಿ ಒಡಕುಂಟು ಮಾಡುವ ಪ್ರಯತ್ನಗಳು ಇಲ್ಲವೇ ಅಪರಾಧ ಸುದ್ದಿಗಳೇ ಎದ್ದುಕಾಣುತ್ತವೆ. ಇಂಥ ಸುದ್ದಿಗಳು ಏನನ್ನು ಸೂಚಿಸುತ್ತವೆ? ಇವುಗಳನ್ನು ಸಮಾಜದ ಗಮನಸೆಳೆದಿರುವ ಅಥವಾ ಚರ್ಚೆಯಲ್ಲಿರುವ ಸಂಗತಿಗಳೆಂದು ಭಾವಿಸಬಹುದೆ?

ಅಭಿವೃದ್ಧಿ ಚಟುವಟಿಕೆಗಳು ಹಾಗೂ ಜನಜೀವನದ ಸಮಸ್ಯೆಗಳು ಪ್ರಜಾಸತ್ತಾತ್ಮಕ ಸಮಾಜದಲ್ಲಿ ಅನುದಿನದ ಚರ್ಚೆಯ ಸಂಗತಿಗಳಾಗಿರಬೇಕು. ನಮ್ಮಲ್ಲಿ ಅಂಥ ಚರ್ಚೆಗಳು ವಿರಳವಾಗಿರುವ ಕಾರಣದಿಂದಾಗಿ, ಎರಡು ತೀರ್ಮಾನಗಳಿಗೆ ಬರಬಹುದು. ಒಂದು: ಸಮಾಜದಲ್ಲಿ ಯಾವುದೇ ಬಿಕ್ಕಟ್ಟುಗಳಿಲ್ಲದೆ ಸಂತೃಪ್ತಿಯ ಭಾವ ನೆಲೆಸಿದೆ. ಎರಡು: ಸಮಸ್ಯೆಗಳನ್ನು ಗುರ್ತಿಸುವಷ್ಟು, ಆ ಬಗ್ಗೆ ಚರ್ಚಿಸದಷ್ಟು ನಮ್ಮ ಸಾಮಾಜಿಕ ಚಿಂತನಾಕ್ರಮ ಜಡವಾಗಿದೆ. ಇವುಗಳಲ್ಲಿ ಎರಡನೇ ತೀರ್ಮಾನವೇ ಸರಿ ಎನ್ನುವುದಕ್ಕೆ ಉದಾಹರಣೆಯಾಗಿ ಬೆಂಗಳೂರಿಗೆ ಸಂಬಂಧಿಸಿದ ಇತ್ತೀಚಿನ ಎರಡು ಘಟನೆಗಳನ್ನು ನೆನಪಿಸಿಕೊಳ್ಳಬಹುದು. ಮಹಾನಗರದಲ್ಲಿನ ರಸ್ತೆಗಳಲ್ಲಿರುವ ಗುಂಡಿಗಳನ್ನು ಸರಿಪಡಿಸಲಾಗದ ವ್ಯವಸ್ಥೆಯನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿರುವುದು ಹಾಗೂ ಉತ್ತರ ಕರ್ನಾಟಕ – ಕಲ್ಯಾಣ ಕರ್ನಾಟಕ ಸೇರಿದಂತೆ ನಾಡಿನ ಬಹುದೊಡ್ಡ ಭಾಗವನ್ನು ಬೆಂಗಳೂರಿಗೆ ಸಂಪರ್ಕಿಸುವ ತುಮಕೂರು ರಸ್ತೆಯ ಮೇಲ್ಸೇತುವೆಗೆ ಸಂಬಂಧಿಸಿದ ಕಳಪೆ ಕಾಮಗಾರಿ ಆ ಎರಡು ಘಟನೆಗಳು. ಮೂಲಭೂತ ಸೌಕರ್ಯಗಳ ಲೋಪ–ಅವ್ಯವಸ್ಥೆಗೆ ಸಂಬಂಧಿಸಿದ ಈ ಎರಡೂ ವಿದ್ಯಮಾನಗಳು ರಾಜಕೀಯ ಹಾಗೂ ಸಾಮಾಜಿಕ ಭ್ರಷ್ಟತೆಯನ್ನು ಸೂಚಿಸುತ್ತಿವೆ ಹಾಗೂ ಸಾರ್ವಜನಿಕ ಜೀವನದಲ್ಲಿ ನೈತಿಕೆಯನ್ನು ಅಪೇಕ್ಷಿಸುವವರಲ್ಲಿ ಕಳವಳ ಹುಟ್ಟಿಸುವಂತಿವೆ.

ಬೆಂಗಳೂರಿನಲ್ಲಿನ ರಸ್ತೆಗುಂಡಿಗಳನ್ನು ಮುಚ್ಚುವಂತೆ ಮಹಾನಗರ ಪಾಲಿಕೆ ಹಾಗೂ ಮುಖ್ಯ ಎಂಜಿಯರ್‌ಅನ್ನು ಹೈಕೋರ್ಟ್ ಗದರುತ್ತಿರುವುದು ಇದು ಮೊದಲೇನಲ್ಲ. ಪ್ರತಿ ವರ್ಷವೂ ಗಂಡಾಂತರಕಾರಿ ಗುಂಡಿಗಳು ಸುದ್ದಿ ಮಾಡುತ್ತಲೇ ಇರುತ್ತವೆ; ಅಮಾಯಕರು ಗುಂಡಿಗಳಿಗೆ ಬಲಿಯಾಗುತ್ತಲೇ ಇದ್ದಾರೆ. ಮಳೆಯ ದಿನಗಳಲ್ಲಂತೂ ರಸ್ತೆಗಳಲ್ಲಿನ ಗುಂಡಿಗಳು ಮತ್ತಷ್ಟು ಭೀಕರವಾಗಿರುತ್ತವೆ. ಮಕ್ಕಳು, ಮಹಿಳೆಯರು, ಹಿರಿಯ ನಾಗರಿಕರು ಸೇರಿದಂತೆ ಗುಂಡಿಗಳಿಂದ ಸಾವಿಗೀಡಾಗುವ, ಗಾಯಗೊಳ್ಳುವವರ ಸುದ್ದಿಗಳು ನಿಯಮಿತವಾಗಿ ಪ್ರಕಟವಾಗುತ್ತಿವೆ. ಶರ್ಮಿಳಾ ಎನ್ನುವ ಶಿಕ್ಷಕಿಯೊಬ್ಬರು ದ್ವಿಚಕ್ರ ವಾಹನದಲ್ಲಿ ಹೋಗುವಾಗ ರಸ್ತೆಯಲ್ಲಿನ ಗುಂಡಿ ತಪ್ಪಿಸಲು ಹೋಗಿ ಆಯ ತಪ್ಪಿ ಸಾವಿಗೀಡಾದ ಘಟನೆ ಇತ್ತೀಚೆಗಷ್ಟೇ ನಡೆದಿದೆ. ಆದರೆ, ಈ ಸಾವುನೋವುಗಳಿಂದ ವಿಚಲಿತಗೊಳ್ಳದ ಪಾಲಿಕೆಯ 'ರಸ್ತೆ ರಿಪೇರಿ ಪ್ರಹಸನ' ಬೆಂಗಳೂರಿನಲ್ಲಿ ಎಂದಿನಂತೆ ಚಾಲ್ತಿಯಲ್ಲಿದೆ. ಸರ್ಕಾರದ ವಿವಿಧ ಇಲಾಖೆಗಳ ನಡುವಣ ಹೊಂದಾಣಿಕೆಯ ಕೊರತೆ ಹಾಗೂ ಅಧಿಕಾರಿಗಳು–ಗುತ್ತಿಗೆದಾರರ ಹಣದಾಹ ಗುಂಡಿಗಳ ರೂಪದಲ್ಲಿ ಅನಾವರಣಗೊಂಡಂತಿದೆ. ಈ ಅವ್ಯವಸ್ಥೆಯಿಂದ ರೋಸಿಹೋಗಿರುವ ಹೈಕೋರ್ಟ್, ಕಠಿಣ ತೀರ್ಮಾನ ನೀಡಲು ಹಿಂಜರಿಯುವುದಿಲ್ಲವೆಂದು ಅಧಿಕಾರಿಗಳನ್ನು ಎಚ್ಚರಿಸಿದೆ.

ತುಮಕೂರು ರಸ್ತೆಯ ಫ್ಲೈಓವರ್ ಕಥೆ ಮತ್ತೂ ದಾರುಣವಾದುದು. ರಿಪೇರಿ–ನಿರ್ವಹಣೆ ಹೆಸರಿನಲ್ಲಿ ಸುಮಾರು ಒಂದೂವರೆ ತಿಂಗಳ ಕಾಲ ಮುಚ್ಚಿದ ನಂತರ ಲಘು ವಾಹನಗಳ ಸಂಚಾರಕ್ಕೆ ಫ್ಲೈಓವರ್ ತೆರೆಯಲಾಗಿದೆ. ಭಾರೀ ವಾಹನಗಳ ಭಾರವನ್ನು ತಡೆದುಕೊಳ್ಳುವಷ್ಟು ಸಾಮರ್ಥ್ಯ ಹೊಂದಿಲ್ಲ ಎನ್ನುವ ಕಾರಣಕ್ಕೆ ಬಸ್–ಟ್ರಕ್‌ಗಳ ಸಂಚಾರಕ್ಕೆ ಈಗಲೂ ಅವಕಾಶವಿಲ್ಲ. ಸುಮಾರು 4 ಕಿ.ಮೀ. ಉದ್ದದ, ಹನ್ನೊಂದು ವರ್ಷಗಳ ಪ್ರಾಯದ ಫ್ಲೈಓವರ್ ಅಂಗವೈಕಲ್ಯಕ್ಕೆ ಯಾರು ಜವಾಬ್ದಾರಿ? ಸಮಸ್ಯೆಯನ್ನು ಸರಿಪಡಿಸುವುದು ಹೇಗೆ? ಯಾವಾಗ? ಈ ಪ್ರಶ್ನೆಗಳಿಗೆ ಉತ್ತರಿಸುವವರು ಯಾರು?

ಬೆಂಗಳೂರಿನಲ್ಲಿ ಮಾತ್ರವಲ್ಲ, ದೇಶದ ಇತರ ಮಹಾನಗರಗಳಲ್ಲೂ ಕಳಪೆ ಕಾಮಗಾರಿಗಳ ಫ್ಲೈಓವರ್‌ಗಳು ಆಗಾಗ ಸುದ್ದಿಯಾಗುತ್ತಿರುತ್ತವೆ. ಅದಕ್ಕೆ ಕಾರಣರಾದವರಿಗೆ ಶಿಕ್ಷೆಯಾದ ಉದಾಹರಣೆಗಳು ಮಾತ್ರ ತಿಳಿಯುವುದಿಲ್ಲ. ಕಳಪೆ ಕಾಮಗಾರಿಗಳ ಹಿಂದೆ ಯಾವುದೋ ಗುತ್ತಿಗೆದಾರನಷ್ಟೇ ಇರುವುದಿಲ್ಲ. ಅಧಿಕಾರಿಗಳು ಹಾಗೂ ರಾಜಕಾರಣಿಗಳ ಎಂಜಲುಕೈಗಳೂ ಇರುತ್ತವೆ. ವೈಯಕ್ತಿಕ ಹಿತಾಸಕ್ತಿಯ ಮುಂದೆ ಸಾರ್ವಜನಿಕ ಹಿತಾಸಕ್ತಿಗೆ ಚಿಕ್ಕಾಸಿನ ಬೆಲೆಯೂ ಇಲ್ಲದಿರುವುದಕ್ಕೆ ಆಧುನಿಕ ಭಾರತ ಮತ್ತೆ ಮತ್ತೆ ಸಾಕ್ಷಿ ಒದಗಿಸುತ್ತಿದೆ.

ಬೆಂಗಳೂರಿನ ರಸ್ತೆಗಳಲ್ಲಿನ ಗುಂಡಿಗಳು ಹಾಗೂ ಫ್ಲೈಓವರ್‌ನ ಅಂಗವೈಕಲ್ಯ ಸ್ಥಾವರಗಳ ದೋಷಪೂರಿತ ರಚನೆ ಎಂದು ಭಾವಿಸಬಾರದು. ಅವು ನಮ್ಮ ವ್ಯವಸ್ಥೆ ಗುಂಡಿಗೆ ಬಿದ್ದಿರುವುದನ್ನೂ ಅಂಗವೈಕಲ್ಯಕ್ಕೆ ತುತ್ತಾಗಿರುವುದನ್ನೂ ಸೂಚಿಸುವಂತಿದೆ. ಮತ್ತೂ ವಿಷಾದದ ಸಂಗತಿಯೆಂದರೆ, ಅನೈತಿಕತೆಯನ್ನು ಪ್ರಶ್ನಿಸಬೇಕಾದ ಜನತೆಗೆ ವರ್ತಮಾನದ ಬಿಕ್ಕಟ್ಟುಗಳು ಸಮಸ್ಯೆಯ ರೂಪದಲ್ಲಿ ಕಾಣಿಸುತ್ತಲೇ ಇಲ್ಲ. ಹಸಿವು–ಸಂಕಟಗಳಿಗಿಂತಲೂ ಮನುಷ್ಯ ಮನುಷ್ಯನಲ್ಲಿ ತೋರಬೇಕಾದ ಕರುಣೆಗಿಂತಲೂ ತಲೆ–ಕೊರಳಿನ ಬಟ್ಟೆ–ಸಂಕೇತಗಳೇ ಈಗ ಹೆಚ್ಚು ಮುಖ್ಯವಾಗಿವೆ.

■ ರಘುನಾಥ ಚ.ಹ.

ಕಳಪೆ ಕಾಮಗಾರಿಗಳ ಹಿಂದೆ ಯಾವುದೋ ಗುತ್ತಿಗೆದಾರನಷ್ಟೇ ಇರುವುದಿಲ್ಲ. ಅಧಿಕಾರಿಗಳು ಹಾಗೂ ರಾಜಕಾರಣಿಗಳ ಎಂಜಲುಕೈಗಳೂ ಇರುತ್ತವೆ. ವೈಯಕ್ತಿಕ ಹಿತಾಸಕ್ತಿಯ ಮುಂದೆ ಸಾರ್ವಜನಿಕ ಹಿತಾಸಕ್ತಿಗೆ ಚಿಕ್ಕಾಸಿನ ಬೆಲೆಯೂ ಇಲ್ಲದಿರುವುದಕ್ಕೆ ಆಧುನಿಕ ಭಾರತ ಮತ್ತೆ ಮತ್ತೆ ಸಾಕ್ಷಿ ಒದಗಿಸುತ್ತಿದೆ.

